# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 871 + 872 |
| ಉತ್ತರಿಸುವ ದಿನಾಂಕ | 24-07-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಾವೇರಿ 2.0 ತಂತ್ರಾಂಶದ ಸಮಸ್ಯೆಯಿಂದಾಗಿ ಋಣಭಾರ ಪ್ರಮಾಣ ಪತ್ರ (ಇಸಿ) ವಿತರಣೆ ಪ್ರಕ್ರಿಯೆ ಸ್ಥಗಿತಗೊಂಡು ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕಾವೇರಿ-2.0 ತಂತ್ರಾಂಶದಲ್ಲಿ ಋಣಭಾರ ಪ್ರಮಾಣ ಪತ್ರದ ವಿತರಣೆ ಸ್ಥಗಿತಗೊಂಡಿರುವುದಿಲ್ಲ. ಎಂದಿನಂತೆ ಪ್ರತಿ ದಿನ ಋಣಭಾರ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದೆ.<br><br>ಕಾವೇರಿ-2.0 ತಂತ್ರಾಂಶದಲ್ಲಿ ನೀಡಲಾಗಿರುವ ಋಣಭಾರ ಪ್ರಮಾಣ ಪತ್ರಗಳ ವಿವರ ಈ ಕೆಳಕಂಡಂತಿದೆ.<br><br><table><tr><th>ಅವಧಿ</th><th>ಸಲ್ಲಿಸಲಾದ ಇ.ಸಿ ಅರ್ಜಿಗಳ ಸಂಖ್ಯೆ</th><th>ವಿತರಿಸಲಾದ ಇ.ಸಿಗಳು</th><th>ಬಾಕಿ ಇರುವ ಅರ್ಜಿಗಳು</th></tr><tr><td>01-06-2023 ರಿಂದ 15-07-2024</td><td>35,69,159</td><td>35,64,863</td><td>4,296</td></tr></table><br>ಅಲ್ಲದೆ ಗಣಕೀಕೃತ ನೋಂದಣಿಗೂ ಪೂರ್ವದಲ್ಲಿ ಅಂದರೆ 2004ಕ್ಕೂ ಮೊದಲು ನೋಂದಣಿಯಾಗಿರುವ ದಸ್ತಾವೇಜುಗಳಿಗೂ ಸಹ ಆನ್‌ಲೈನ್ ಮುಖಾಂತರ ಉಪನೋಂದಣಿ ಕಛೇರಿಗೆ ಭೇಟಿ ನೀಡದೆಯೇ ಋಣಭಾರ ಪ್ರಮಾಣಪತ್ರ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.</td></tr>
<tr><td>ಆ</td><td>ಕಾವೇರಿ 2.0 ತಂತ್ರಾಂಶಕ್ಕೆ ಸರ್ವರ್ ಸಮಸ್ಯೆ ಎದುರಾಗಿದ್ದು ದಿನಗಟ್ಟಲೇ ಸರ್ವರ್ ಡೌನ್ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ವಾರಗಟ್ಟಲೇ ವಿಳಂಬವಾಗಿ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕಾವೇರಿ-2.0 ತಂತ್ರಾಂಶದಲ್ಲಿ ಸರ್ವರ್ ಸಮಸ್ಯೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಗಟ್ಟಲೆ ಅಥವಾ ವಾರಗಟ್ಟಲೆ ದಸ್ತಾವೇಜುಗಳ ನೋಂದಣಿಯಲ್ಲಿ ವಿಳಂಬವಾಗಿರುವುದಿಲ್ಲ. ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜುಗಳು ನೋಂದಣಿಯಾಗುತ್ತಿದ್ದು, ಈ ಹಿಂದೆ ಇದ್ದ ತಂತ್ರಾಂಶಕ್ಕಿಂತ ಹೆಚ್ಚು ದಸ್ತಾವೇಜುಗಳು ಕಾವೇರಿ-2.0 ತಂತ್ರಾಂಶದಲ್ಲಿ ಪ್ರತಿನಿತ್ಯ ನೋಂದಣಿಯಾಗುತ್ತಿದೆ.</td></tr>
<tr><td></td><td></td><td></td></tr>
</table>

| | | |
|---|---|---|
| ಇ | ಬಂದಿದ್ದಲ್ಲಿ, ಸರ್ವರ್ ಸಮಸ್ಯೆಯಿಂದಾಗಿ ಕಾವೇರಿ 2.0 ತಂತ್ರಾಂಶದಲ್ಲಿ ಪ್ರತಿದಿನ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು, ತುರ್ತು ಕಾರಣಕ್ಕಾಗಿ ಜಾಗ ಮಾರಾಟ ಮಾಡಲಾಗದೇ ಹಾಗೂ ಹೊರ ರಾಜ್ಯ ಹಾಗೂ ಹೊರ ದೇಶಗಳಿಗೆ ಹೋಗುವವರು ಸಕಾಲದಲ್ಲಿ ಆಸ್ತಿ ನೋಂದಣಿ ಮಾರಾಟ ಮಾಡಲಾಗದೇ ಇಕ್ಕಟ್ಟಿಗೆ ಸಿಲುಕ್ಕಿದ್ದು ಈ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರೂ ಸಮಸ್ಯೆ ಬಗೆಹರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು; | ದಸ್ತಾವೇಜುಗಳ ನೋಂದಣಿಗೆ ಈ ಹಿಂದೆ ಉಪಯೋಗಿಸಲಾಗುತ್ತಿದ್ದ "ಕಾವೇರಿ" ತಂತ್ರಾಂಶವನ್ನು 2003ನೇ ಸಾಲಿನಲ್ಲಿ ಮೆ:ಸಿ-ಡಾಕ್, ಪುಣೆ ಸಂಸ್ಥೆಯು Visual Basic ಹಾಗೂ Windows XP Platform ಗಳಲ್ಲಿ ಮತ್ತು ಲೋಕಲ್ ಹಾಗೂ ಸೆಂಟ್ರಲ್ ಸರ್ವರ್‌ಗಳ ಆರ್ಕಿಟೆಕ್ಚರ್ ರಡಿ ಅಭಿವೃದ್ಧಿಪಡಿಸಲಾಗಿತ್ತು.<br><br>ಈ ಎರಡು ತಂತ್ರಾಂಶಗಳು Outdated ಆದಕಾರಣ ಮತ್ತು ಪ್ರತಿ ನೋಂದಣಿ ಕಛೇರಿಯಲ್ಲಿ ಲೋಕಲ್ ಸರ್ವರ್‌ಗಳನ್ನು ಹೊಂದಿದ್ದರಿಂದ ಸರ್ವರ್‌ಗಳ ಸಮಸ್ಯೆ ಉಂಟಾಗಿ ನೋಂದಣಿ ಪ್ರಕ್ರಿಯೆಗೆ ಅಡಚಣೆಯಾಗುತ್ತಿತ್ತು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ನೂತನ ಜನಸ್ನೇಹಿ ಕಾವೇರಿ-2.0 ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ.<br><br>ಕಾವೇರಿ-2.0 ತಂತ್ರಾಂಶದಲ್ಲಿ ಸ್ಟೇಟ್ ಡೇಟಾ ಸೆಂಟರ್‌ನಲ್ಲಿ ಒಂದೇ ಒಂದು ಕೇಂದ್ರೀಕೃತ ಸರ್ವರ್ ಇದ್ದು, ಇದರಲ್ಲಿ ಯಾವುದೇ ಸಮಸ್ಯೆ ಉಂಟಾದಲ್ಲಿ ಅವುಗಳನ್ನು ಕೂಡಲೇ ಪರಿಹರಿಸಲಾಗುತ್ತಿದೆ.<br><br>ಕಾವೇರಿ-2.0 ತಂತ್ರಾಂಶವು ಇತರೆ ಇಲಾಖೆಗಳ ತಂತ್ರಾಂಶಗಳಾದ ಮೋಜಣಿ, ಇ-ಸ್ವತ್ತು, ಇ-ಆಸ್ತಿ, ಸಕಾಲ ಮತ್ತು ಖಜಾನೆ-2 ತಂತ್ರಾಂಶಗಳೊಂದಿಗೆ ಸಂಯೋಜನೆಯಾಗಿದ್ದು, ಈ ತಂತ್ರಾಂಶಗಳಲ್ಲಿ ಸಮಸ್ಯೆಗಳು ಉಂಟಾದಲ್ಲಿ ಕಾವೇರಿ-2.0 ತಂತ್ರಾಂಶದಲ್ಲಿನ ದಸ್ತಾವೇಜಿನ ನೋಂದಣಿಗೆ ಪರಿಣಾಮ ಬೀರುತ್ತದೆ. |
| ಈ | ಯಾವ ಕಾಲಮಿತಿಯೊಳಗೆ ಕಾವೇರಿ 2.0 ತಂತ್ರಾಂಶಕ್ಕೆ ಪದೇ ಪದೇ ತಲೆದೋರುತ್ತಿರುವ ಸರ್ವರ್ ಡೌನ್ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಿ, ಸಾರ್ವಜನಿಕರು ತಮ್ಮ ವ್ಯವಹಾರಗಳನ್ನು ಯಾವುದೇ ಸಮಸ್ಯೆ ಮತ್ತು ವಿಳಂಬವಿಲ್ಲದೇ ಮಾಡುವಂತಾಗಲು ಕ್ರಮ ವಹಿಸಲಾಗುವುದು? | ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಪ್ರಾರಂಭದ ದಿನಗಳಲ್ಲಿ ತಂತ್ರಾಂಶದ ಕಾರ್ಯಾಚರಣೆಯಲ್ಲಿ ಕೆಲವೊಂದು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲ ಕ್ರಮೇಣ ಪರಿಹರಿಸಲಾಗಿರುತ್ತದೆ.<br><br>ಈ ತಂತ್ರಾಂಶದಲ್ಲಿ ಪ್ರತಿ ದಿನ 11,000 ರಿಂದ 12,000 ದಸ್ತಾವೇಜುಗಳು ನೋಂದಣಿಯಾಗುತ್ತಿದ್ದು, ದಿನಾಂಕ: 27-09-2023 ರಂದು ಒಂದೇ ದಿನದಲ್ಲಿ ಒಟ್ಟು 26,000 ದಸ್ತಾವೇಜುಗಳು ನೋಂದಣಿಯಾಗಿರುತ್ತದೆ. |

ಕಂಇ/127/ಎಂಎನ್‌ಎಸ್‌ಎ/2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು